VK
ವಿಜಯ ಕರ್ನಾಟಕ
e-paper

x

## ‘ಕವಿ–ಅನುವಾದಕ’ ಕಾರ್ಯಕ್ರಮದಲ್ಲಿ ಸಾಹಿತಿ ಪಟ್ಟಣಶೆಟ್ಟಿ ಅನಿಸಿಕೆ

# ಕಾವ್ಯ ನಿರಂತರ ಅರಿವಿನ ಸೃಜನ ಕ್ರಿಯೆ

**ವಿಕ ಸುದ್ದಿಲೋಕ** ಧಾರವಾಡ

ಕೇಂದ್ರ ಸಾಹಿತ್ಯ ಅಕಾಡೆಮಿ, ಧಾರವಾಡ ಜಿಲ್ಲಾ ಕಸಾಪ ಸಹಯೋಗದೊಂದಿಗೆ ನಗರದ ಸಾಹಿತ್ಯ ಪರಿಷತ್ ಕನ್ನಡ ಭವನದಲ್ಲಿ ಕವಿ-ಅನುವಾದಕ ಎಂಬ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಹಿರಿಯ ಸಾಹಿತಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಮಾತನಾಡಿ, ಕಾವ್ಯ ಎಷ್ಟೇ ಮಹತ್ವದ್ದಾದರೂ ವೈಯಕ್ತಿಕ ನೆಲೆಯಲ್ಲಿ ಹುಟ್ಟಿ ಸಾಮಾಜಿಕ ನೆಲೆಯಲ್ಲಿ ಕೊನೆಗೊಳ್ಳುತ್ತದೆ. ಕವಿ ತನ್ನ ಅಂತರಂಗದ ಭಾವನೆಗಳ ಮೂಲಕ ಹೇಳಬೇಕಾದ ಸಂಗತಿಗಳನ್ನು ಬಳಸಿ ರೂಪಕ ಭಾಷೆಯಲ್ಲಿ ನಿವೇದಿಸಿಕೊಳ್ಳಬೇಕಾಗುತ್ತದೆ. ಅದನ್ನು ಎಷ್ಟು ತೀವ್ರವಾಗಿ ಮಾಡಲು ಸಾಧ್ಯವಿದೆಯೋ, ಅಷ್ಟು ಎತ್ತರಕ್ಕೆ ಕಾವ್ಯ ತಲುಪುತ್ತದೆ. ಶಬ್ದಗಳ ದುಂದುಗಾರಿಕೆ ಮಾಡದೇ ಕಡಿಮೆ ಪದ ಬಳಸಿ ಹೆಚ್ಚು ವಿಸ್ತಾರಕ್ಕೆ ವ್ಯಾಪಿಸುವಾಗಲೇ ಬರವಣಿಗೆ ಯಶಸ್ವಿಯಾಗುತ್ತದೆ. ಇದೊಂದು ನಿರಂತರ ಅರಿವಿನ ಸೃಜನ ಕ್ರಿಯೆಯಾಗಿದ್ದು ಕವಿಯಾದವನು ಅದನ್ನು ಕಾಯ್ದುಕೊಳ್ಳಬೇಕು ಎಂದರು.



ಧಾರವಾಡದ ಸಾಹಿತ್ಯ ಪರಿಷತ್ ಕನ್ನಡ ಭವನದಲ್ಲಿ ಕವಿ-ಅನುವಾದಕ ಕಾರ್ಯಕ್ರಮದಲ್ಲಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಮಾತನಾಡಿದರು.

ಅನುವಾದಕ ಪ್ರೊ.ಧರಣೇಂದ್ರ ಕುರಕುರಿ ಮಾತನಾಡಿ, ಅನುವಾದ ಸವಾಲಿನ ಕೆಲಸ. ಒಂದು ಭಾಷೆಯ ಸಂಸ್ಕೃತಿಯನ್ನು ಮತ್ತೊಂದು ಭಾಷೆಯ ಪರದೆ ಮೇಲೆ ಮೂಡಿಸುವುದು ವಿಶೇಷ ಅನುಭವ ನೀಡುತ್ತದೆ ಎಂದರು.

ಕಸಾಪ ಅಧ್ಯಕ್ಷ ಡಾ.ಲಿಂಗರಾಜ ಅಂಗಡಿ, ಕೇಂದ್ರ ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿ ಸದಸ್ಯ ಚನ್ನಪ್ಪ ಅಂಗಡಿ, ಕಾರ್ತಿಕ ಕಣವಿ, ಪ್ರಮೀಳಾ ಜಕ್ಕಣ್ಣವರ, ಶ್ರೀಧರ ಗಸ್ತಿ, ಹೇಮಾ ಪಟ್ಟಣಶೆಟ್ಟಿ, ಮಲ್ಲಿಕಾರ್ಜುನ ಹಿರೇಮಠ, ರಾಜೇಶ್ವರಿ ಮಹೇಶ್ವರಯ್ಯ, ಅರವಿಂದ ಯಾಳಗಿ, ಪ್ರಕಾಶ ಗರುಡ, ಕೆ.ಎಸ್.ಕೌಜಲಗಿ, ಪ್ರಕಾಶ ಕಡಮೆ ಇದ್ದರು.